# ಉಪತಹಶೀಲ್ದಾರರು, ಹಿರೇಹಡಗಲಿ ಇವರ ನ್ಯಾಯಾಲಯದಲ್ಲಿ

| ಅರ್ಜಿದಾರರು | ತಕರಾರುದಾರರು |
|---|---|
| ಹೆಬ್ಬಾರಿ ಪಾಂಡುರಂಗ ತಂದೆ ಲೇಟ್ ನಾಗೇಂದ್ರಪ್ಪ, ಹೊಳಲು ಗ್ರಾಮ, ಹಡಗಲಿ ತಾ. | ಹೆಬ್ಬಾರಿ ರೇಖಾ ಗಂಡ ಪಾಂಡುರಂಗ, ಹೊಳಲು ಗ್ರಾಮ, ಹಡಗಲಿ ತಾ. |

ವಿವಾದಿತ ಜಮೀನಿನ ವಿವರ:

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಹೊಳಲು | 66/ಜೆ | 0–35 | ಖುಷ್ಕಿ |
| 2. | ,, | 617/ಬಿ | 0–40 | ,, |
| 3. | ,, | 617/ಸಿ | 0–71 | ,, |
| 4. | ,, | 617/ಡಿ | 0–27 | ,, |

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಬೂದನೂರು ಗ್ರಾಮದ ಮೇಲ್ಕಂಡ ಜಮೀನುಗಳಿಗೆ ಸಂಬಂಧಿಸಿದಂತೆ, ಹೊಳಲು ಗ್ರಾಮದ ನಿವಾಸಿಯಾದ ಹೆಬ್ಬಾರಿ ಪಾಂಡುರಂಗ ತಂದೆ ಲೇಟ್ ನಾಗೇಂದ್ರಪ್ಪ ಇವರು ದಿ:22–06–2012 ರಂದು ಮಾಡಿಕೊಂಡ ನೋಂದಣಿಯಾಗದ ಪಾಲುವಿಭಾಗ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ದಿನಾಂಕ 01–12–2014 ರಂದು ಅರ್ಜಿ ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ–21 ರ ನೋಟೀಸು ದಿ:8–12–2014 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿ:02–01–2015 ರಂದು ಹೆಬ್ಬಾರಿ ರೇಖಾ ಗಂಡ ಪಾಂಡುರಂಗ, ಹೊಳಲು ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಾರಣ ಎಂ.ಆರ್.ಸಂಖ್ಯೆ 53/14–15 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವಿಚಾರಣೆಗೆ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿ:23–04–2014 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮತ್ತು ತಕರಾರುದಾರರು ಸದರಿ ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ತಕರಾರುದಾರರು ದಿ:23–4–2014 ರಂದು ಒಮ್ಮೆ ಮಾತ್ರ ಹಾಜರಾಗಿರುತ್ತಾರೆ. ತದನಂತರ ಸತತವಾಗಿ ಗೈರು ಹಾಜರಾಗಿರುತ್ತಾರೆ. ತಕರಾರುದಾರರು ಸಲ್ಲಿಸಿದ ಕೈ ಬರಹದ ವಂಶವೃಕ್ಷದ ಪ್ರಕಾರ ಅವರು ಅರ್ಜಿದಾರರ ಹೆಂಡತಿಯಾಗಿರುತ್ತಾರೆ. ಆದರೆ ತಕರಾರುದಾರರು ತಮ್ಮ ತಕರಾರು ಅರ್ಜಿಯಲ್ಲಿ ತಕರಾರಿಗೆ ಕಾರಣಗಳನ್ನು ತಿಳಿಸದೆ ಹಕ್ಕು ಬದಲಾವಣೆ ಮಾಡಬಾರದೆಂದು ತಕರಾರು ಸಲ್ಲಿಸಿರುತ್ತಾರೆ. ತಕರಾರುದಾರರು ಒಮ್ಮೆ ಮಾತ್ರ ವಿಚಾರಣೆಗೆ ಹಾಜರಾಗಿರುತ್ತಾರೆ. ಆದರೆ ಯಾವುದೇ ಹೇಳಿಕೆಯನ್ನಾಗಲಿ ಅಥವಾ ದಾಖಲೆಗಳನ್ನಾಗಲೀ ಸಲ್ಲಿಸಿರುವುದಿಲ್ಲ. ಅರ್ಜಿದಾರರು ಪಾಲುವಿಭಾಗ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಲು ಕೋರಿರಿತ್ತಾರೆ.

ಪ್ರಕರಣಕ್ಕೆ ಸಂಬಂದಿಸಿದಂತೆ ಅರ್ಜಿದಾರರ ಮತ್ತು ತಕರಾರುದಾರರ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು. ಮಾನ್ಯ ಸಿವಿಲ್ ನ್ಯಾಯಾಲಯ, ಹಡಗಲಿಯಲ್ಲಿ ಒ.ಎಸ್.ನಂ.90/2013 ಪ್ರಕರಣದಲ್ಲಿ ತಕರಾರುದಾರರು ದಾವೆ ಹೂಡಿದ ಬಗ್ಗೆ ದಾವಾ ಅರ್ಜಿ ಪ್ರತಿ ಸಲ್ಲಿಸಿದ್ದು, ನ್ಯಯಾಲಯದಿಂದ ಆದೇಶವಾದ ಬಗ್ಗೆಯಾಗಲೀ ಅಥವಾ ತಡೆಯಾಜ್ಞೆಯಾಗಲಿ ಸಲ್ಲಿಸಿರುವುದಿಲ್ಲ.ತಕರಾರುದಾರರು ಒಮ್ಮೆ ಮಾತ್ರ ವಿಚಾರಣೆಗೆ ಹಾಜರಾಗಿದ್ದು, ಆದರೆ ಯಾವುದೇ ಹೇಳಿಕೆಯನ್ನಾಗಲಿ ಅಥವಾ ದಾಖಲೆಗಳನ್ನಾಗಲೀ ಸಲ್ಲಿಸಿರುವುದಿಲ್ಲ. ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ತಕರಾರುದಾರರ ತಕರಾರಿನಲ್ಲಿ ಯಾವುದೇ ಹುರುಳಿಲ್ಲ. ತಕರರುದಾರರು ತಮ್ಮ ಹಕ್ಕನ್ನು ಸಾಭೀತುಪಡಿಕೊಲ್ಲುವ ಅವಶ್ಯಕತೆ ಇರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ಪಹಣಿ/ವಿವಾದ/36/2014–15 ದಿನಾಂಕ:17–10–2016 .

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ರ ಪ್ರಕಾರ ಎಂ.ಆರ್.ಸಂಖ್ಯೆ 53/14–15 ರ ಪ್ರಕರಣದಲ್ಲಿ ಅರ್ಜಿದಾರರ ಅರ್ಜಿಯನ್ನು ಪುರಸ್ಕರಿಸಿ ಆದೇಶಿಸಿದೆ. ತಕರಾರುದರರು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಸ್ಥಿರಪಡಿಸಿಕೊಂಡು ಪರಿಹರ ಕಂಡುಕೊಳ್ಳಲು ಆದೇಶೀಸಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಹಿರೇಹಡಗಲಿ.

ಪ್ರತಿಯನ್ನು

1. ವಾದಿ ಮತ್ತು ಪ್ರತಿವಾದಿಗಳಿಗೆ
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಶುದ್ಧಪ್ರತಿ.